ತಾರೀಖು 11ನೇ ಡಿಸೆಂಬರ್ 1896.

ನಂ. 5402.—ರೆ. ಫೈ. 33.—96, ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಕೆ. ಶ್ರೀನಿವಾಸರಾಯರಿಗೆ, 1896ನೇ ನವಂಬರ್ 3ನೇ ಮಕ್ತುಂ 4112.—ರೆ. ಫೈ. 33.—96ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಈಹಿಲೆ ರಜಾ 1897ನೇ ಜನವರಿ 1ನೇ ತಾರೀಖಿನ ವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ನಂ. 5405.—ರೆ. ಫೈ. 50.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಷಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಕೊರಟಗೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ ಬಿ. ವಾಸುದೇವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಮದ್ದಗಿರಿ ತಾಲ್ಲೂಕು ಅಮಲ್‌ದಾರ್ರು ತಮ್ಮ ಕೆಲಸಗಳೊಂದಿಗೆ ಸದರೀ ಡೆಪ್ಯುಟಿ ಅಮಲ್‌ದಾರ್ರು ರಜಾದ ಮೇಲಿರುವ ಕಾಲದಲ್ಲಿ ಕೊರಟಗೆರೆ ಸಬ್ ತಾಲ್ಲೂಕಿನ ಚಾರ್ಜಿನಲ್ಲಿ ಇರತಕ್ಕದ್ದು.

ಹುಕುಂ ಬವೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ಮೆಂಟ್ ಸೆಕ್ರಟೆರಿ.

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 8ನೇ ಡಿಸೆಂಬರ್ 1896.

ನಂ. 1006.—6503, ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಸರ್ ವಿ. ರಂಗಸಾಮಿ ಅಯ್ಯಂಗಾರ್, ಬಿ. ಸಿ, ಈ., ಯವರು, ಯಗ್ಜಿಕ್ಯೂಟಿವ್ ಇಂಜಿನಿಯರ್ ಮೆಸ್ಸರ್ಸ್ ಆರ್. ಟಿ. ಸ್ಕಾಲ್ಡ್‌ವೆಲ್‌ಯವರು ಪ್ರಿವಿಲೀಜ್ ರಜಾಪಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಹೆಸರಘಟ್ಟಾ ವಾಟರ್ ಸಪ್ಲೈ ಡಿವಿಜನಿನ ಯಗ್ಜಿಕ್ಯೂಟಿವ್ ಇಂಜಿನಿಯರಾಗಿ ಅಫಿಷಿಯೇಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬವೋಜೀಬ್,
ಸಿ. ಬರ್ಡ್, ಕರ್ನಲ್,
ಮೈಸೂರ್ ಗವರ್ಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರಟೆರಿ.